ಇ) ಸರ್ಕಾರವು ಕಿಂಕೋ ಸಂಸ್ಥೆಯನ್ನು ಸದಾ ಕಾರ್ಯದಲ್ಲಿ ತೊಡಗುವಂತೆ ಮಾಡಲು ಅನೇಕ ಕ್ರಮಗಳನ್ನು ತೆಗೆದುಕೊಂಡಿದೆ ಹಾಗೂ ಈ ಕಂಪನಿಯು ಕೆಲಸದ ಫಲಿತಾಂಶ ವೃದ್ಧಿಯಾಗಲು ಇವರಿಗೆ ಸಾಕಷ್ಟು ವಾಹನ ಕವಚ ಕಟ್ಟುವ ಕೆಲಸವನ್ನು ನೀಡುವಂತೆ ಕೆ.ಎಸ್.ಆರ್.ಟಿ.ಸಿ.ಯನ್ನು ಸದಾ ಒತ್ತಾಯಿಸುತ್ತಲೇ ಬಂದಿದೆ ಮತ್ತು ಸರ್ಕಾರವು ದುಡಿಯುವ ಬಂಡವಾಳವನ್ನು ಸಹ ನೀಡಿದರು ಆದರೂ ಸಹ ಕಂಪನಿಯು ಕಾರ್ಯದಲ್ಲಿ ಪ್ರಗತಿ ಕಂಡು ಬಂದಿರುವುದಿಲ್ಲ.

ಗ್ರಾನೈಟ್ ವ್ಯವಹಾರದ ಸರ್ಕಾರೀಕರಣ

2397 - ಶ್ರೀ ಬಾಬಾಗೌಡ ಪಾಟೀಲ್ (ಕಿತ್ತೂರು) ಮಾನ್ಯ ಗಣಿ ಮತ್ತು ಭೂ ವಿಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗ್ರಾನೈಟ್ ಕಲ್ಲಿನ ವ್ಯವಹಾರವನ್ನು ಖಾಸಗಿಯಾಗಿ ಗುತ್ತಿಗೆ ಕೊಡುವುದರಿಂದ ಸರ್ಕಾರಕ್ಕೆ ವರ್ಷಕ್ಕೆ ಸಾವಿರಾರು ಕೋಟಿ ರೂಪಾಯಿ ಹಾನಿಯಾಗುತ್ತದೆಂಬುದನ್ನು ತಜ್ಞರ ಸಮಿತಿ ರಚನೆ ಮಾಡಿ ಸರ್ಕಾರ ಖಚಿತಪಡಿಸಿಕೊಳ್ಳುವುದೇ?

ಶ್ರೀ ಎಂ ಎಲ್ ಉಸ್ತಾದ್ (ಗಣಿ ಮತ್ತು ಭೂ ವಿಜ್ಞಾನ ರಾಜ್ಯ ಸಚಿವರು)

ಅ) ಇಲ್ಲ

ವೈದ್ಯಾಧಿಕಾರಿಗಳ ಬಗ್ಗೆ

2508 - ಶ್ರೀ ಮಂಜುನಾಥ ಸಿ. ಕುನ್ನೂರ (ಶಿಗ್ಗಾಂವ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸಮುದಾಯ ಆರೋಗ್ಯ ಕೇಂದ್ರದಲ್ಲಿ ನಿಯಮಾವಳಿ ಪ್ರಕಾರ ವೈದ್ಯಾಧಿಕಾರಿಗಳ ಸಂಖ್ಯೆ ಎಷ್ಟು?

ಆ) ಶಿಗ್ಗಾಂವ ಸಿ.ಹೆಚ್.ಸಿ. (ಸಮೂದಾಯ ಆರೋಗ್ಯ ಕೇಂದ್ರ) ಕೇಂದ್ರಕ್ಕೆ ಇನ್ನುಳಿದ ವೈದ್ಯಾಧಿಕಾರಿಗಳನ್ನು ಕೂಡಲೇ ನೇಮಿಸಲಾಗುವುದೇ?

ಇ) ಶಿಗಾಂವ ತಾಲ್ಲೂಕು ಬಕಾಪುರ ಪಿ.ಹೆಚ್.ಸಿ ಯನ್ನು 30 ಹಾಸಿಗೆಗಳನ್ನು ಹೊಂದುವಂತೆ ಮೇಲ್ದರ್ಜೆಗೆ ಏರಿಸಲಾಗುವುದೇ?

ಶ್ರೀ ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಮೂವರು ವೈದ್ಯರು ಒಬ್ಬ ದಂತ ವೈದ್ಯರು

ಆ) ಶಿಗ್ಗಾಂದ ಸಮುದಾಯ ಆರೋಗ್ಯಕೇಂದ್ರದಲ್ಲಿ ಈಗಾಗಲೇ ಇಬ್ಬರು ವೈದ್ಯಾಧಿಕಾರಿಗಳಿದ್ದು ಇನ್ನುಳಿದ ವೈದ್ಯರನ್ನು ನೇಮಿಸಲು ಪರಿಶೀಲಿಸಲಾಗುವುದು.

ಇ) ಸದ್ಯಕ್ಕೆ ಸರ್ಕಾರದ ಪರಿಶೀಲನೆಯಲ್ಲಿಲ್ಲ

ಕಟೀಲು ಆಸ್ಪತ್ರೆ ಕಟ್ಟಡ

2476 - ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದ್ರೆ) : ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಟೀಲು ಆಸ್ಪತ್ರೆಗೆ ಕಟ್ಟಡದ ಕೊರತೆಯನ್ನು ನೀಗಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಆ) ಕಟೀಲು ಶ್ರೀ ದುರ್ಗಾ ಪರಮೇಶ್ವರಿ ದೇವಸ್ಥಾನದವರು ಸದರಿ ಆಸ್ಪತ್ರೆಯ ಕಟ್ಟಡದ ನಿರ್ಮಾಣಕ್ಕೆ ರೂ 5-00 ಲಕ್ಷ ಸಹಾಯಧನ ಕೊಡುವುದು